**ಗೌರಿಬಿದನೂರು ಪಟ್ಟಣದಲ್ಲಿ ಕ.ರಾ.ರ ಸಾ.ಸ ಬಸ್ ಘಟಕ ಸ್ಥಾಪನೆ**

181(183) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್(ಗೌರಿಬಿದನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗೌರಿಬಿದನೂರು ಪಟ್ಟಣದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಘಟಕವನ್ನು ಸ್ಥಾಪಿಸಲು ಸರ್ಕಾರದಿಂದ ಮಂಜೂರಾಗಿರುವುದು ನಿಜವಲ್ಲವೇ;

ಆ. ಹಾಗಿದ್ದಲ್ಲಿ ಇದುವರೆವಿಗೂ ಬಸ್ ಘಟಕವನ್ನು ಸ್ಥಾಪಿಸದೆ ವಿಳಂಬವಾಗಲು ಕಾರಣವೇನು;

ಇ. ಬಸ್ ಘಟಕವನ್ನು ಸಕಾಲದಲ್ಲಿ ಸ್ಥಾಪಿಸಿ, ಈ ಭಾಗದ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಂಡುವುದು ಯಾವಾಗ'

ಈ. ಈ ಹೊಸ ಬಸ್ ಘಟಕ ಸ್ಥಾಪನೆಗೆ ಆಯೋಜಿಸಿರುವ ಅಂದಾಜು ವೆಚ್ಚ ಎಷ್ಟು?

ಶ್ರೀ ಬಿ.ರಮಾನಾಥ್ ರೈ (ಸಾರಿಗೆ ಸಚಿವರು)

ಅ. ಹೌದು

ಆ. ಸಂಸ್ಥೆಯ ಆರ್ಥಿಕ ಪರಿಸ್ಥಿತಿಯಿಂದ ನಿರ್ಮಾಣ ಕಾರ್ಯ ಪ್ರಾರಂಭಿಸಲು ವಿಳಂಬವಾಗಿರುತ್ತದೆ . ಪ್ರಸ್ತುತ ಸಾಲಿನಲ್ಲಿ 60.00 ಲಕ್ಷ ರೂಗಳಿಗೆ ಆಡಳಿತಾತ್ಮಕ ಒಪ್ಪಿಗೆ ನೀಡಲಾಗಿದ್ದು ಶೀಘ್ರವಾಗಿ ಟೆಂಡರ್ ಕರೆದು ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಜರುಗಿಸಲಾಗಿದೆ.

ಇ. ಆರ್ಥಿಕ ಪರಿಸ್ಥಿತಿ ಅನುಗುಣವಾಗಿ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ಪ್ರಯಾಣಿಕರಿಗೆ ಅನುಕೂಲ ಮಾಡಲಾಗುವುದು.

ಈ. ರೂ.60.00 ಲಕ್ಷಗಳು

**ಗೌರಿಬಿದನೂರು ಪಟ್ಟಣಗಳಲ್ಲಿ ಆರಕ್ಷಕ ವಸತಿ ಸಮುಚ್ಛಯ ಕಟ್ಟಡ ನಿರ್ಮಾಣ**

182(184) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್.(ಗೌರಿಬಿದನೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗೌರಿಬಿದನೂರು ಪಟ್ಟಣದಲ್ಲಿ ಆರಕ್ಷಕ ವಸತಿ ಸಮುಚ್ಚಯ ಕಟ್ಟಡವನ್ನು ನಿರ್ಮಿಸುವ ಪ್ರಸ್ತಾಪನೆಯು ಸರ್ಕಾರದ ಮುಂದಿದೆಯೆ

ಆ. ಹಾಗಿದ್ದರೆ ಈ ವಸತಿ ಕಟ್ಟಡಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ಯಾವ ಅವಧಿಯಲ್ಲಿ ವಸತಿ ಕಟ್ಟಡ ಕಾಮಗಾರಿಯನ್ನು ಪೂರೈಸಲಾಗುವುದು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ. ಹೌದು

ಆ. ಪರಿಶೀಲನೆಯಲ್ಲಿದೆ.

**ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿಗಳ ಪ್ರಗತಿ**

185(34) ಶ್ರೀ ವಿ. ಸೋಮಣ್ಣ (ಚಿಕ್ಕಪೇಟೆ) : ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ನಾಗರೀಕ ವಿಮಾನ ಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ದೇವನಹಳ್ಳಿಯ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರ ಇದುವರೆಗೆ ಕೈಗೊಂಡ ಕ್ರಮಗಳೇನು:

ಆ. ಇದಕ್ಕಾಗಿ ಇದುವರೆಗೆ ರಾಜ್ಯ ಸರ್ಕಾರ ಖರ್ಚು ಮಾಡಿದ ಹಣವೆಷ್ಟು:

ಇ. ಈ ಯೋಜನೆಗೆ ಯಾವಾಗ ಶಂಕುಸ್ಥಾಪನೆ ನೆರವೇರಿಸಲಾಯಿತು:

ಈ. ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ಬರಬೇಕಾದ ಪರವಾನಿಗೆಗಳ ವಿವರ ನೀಡುವುದು;

ಉ. ಈ ಯೋಜನೆ ಯಾವಾಗ ಆರಂಭಗೊಳ್ಳುವುದು ಹಾಗೂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ವಿಮಾನಗಳ ಹಾರಾಟಕ್ಕೆ ಸಿದ್ದಗೊಳಿಸಲಾಗುವುದು?

ಶ್ರೀ ಟಿ.ಜಾನ್ (ಮೂಲ ಸೌಲಭ್ಯ ಅಭಿವೃದ್ದಿ ಮತ್ತು ನಾಗರೀಕ ವಿಮಾನಯಾನ ರಾಜ್ಯ ಸಚಿವರು.

ಅ. ಜನವರಿ 2002ರಲ್ಲಿ ಷೇರುದಾರರ ನಡುವೆ ಆದ ಒಪ್ಪಂದದ ತರುವಾಯ (ಕೆಎಸ್ಐಐಡಿಸಿ, ಭಾರತೀಯ ವೈಮಾನಿಕ ಪ್ರಾಧಿಕಾರ ಮತ್ತು ಸೀಮನ್ಸ್ ಮುಖಿಂಡತ್ವದ ಸಂಯೋಗ) ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1. ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ. ನಿಲ್ದಾಣ ನಿಗಮ ನಿಯಮಿತದ ನಿರ್ದೇಶಕರ ಮಂಡಳಿಯನ್ನು ಪುನರ್ ರಚಿಸಲಾಗಿದೆ.

2. ಪೂರ್ಣ ಪ್ರಮಾಣದ ಬಿ.ಐ.ಎ.ಎಲ್.ಕಛೇರಿಯನ್ನು ಸ್ಥಾಪಿಸಿದ್ದು ಮತ್ತು ಅದು ಈಗ ಕಾರ್ಯನಿರತವಾಗಿದೆ.

3. ಯೋಜನೆಯ ಎಲ್ಲಾ ಅಂಶಗಳು ಪ್ರಗತಿಯನ್ನು ಉಸ್ತುವಾರಿ ಮಾಡಲು ಮತ್ತು ನಿರ್ಣಯ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಸಮನ್ವಯ ಸಮಿತಿಯೊಂದನ್ನು ರಚಿಸಲಾಗಿದೆ.

4. ಯೋಜನೆಯನ್ನು ಸಮಗ್ರವಾಗಿ: ಕೂಲಂಕಷವಾಗಿ ಕೈಗೆತ್ತಿಕೊಳ್ಳಲಾಗಿದೆ. ಅದು ಈ ಕೆಳಕಂಡ ಕಾಮಗಾರಿಗಳನ್ನು ಒಳಗೊಂಡಿದೆ. ಸಂಚಾರದ ಅಧ್ಯಾಯನದ ಪುನರೀಕ್ಷಣೆ ಸಮಗ್ರ ಯೋಜನೆಯನ್ನು ಅಂತಿಮಗೊಳಿಸುವುದು. ಸವಿಸ್ತಾದವಾದ ಮಾದರಿ ಮತ್ತು ಇಂಜಿನಿಯರ್ರಿಂಗ್, ಹಣಕಾಸು ಮಾದರಿ ಮತ್ತು ವ್ಯವಹಾರ ನಕ್ಷೆಯ ಪುನರೀಕ್ಷಣೆ ಇಪಿಸಿ ಕರಾರುಗಳನ್ನು ಅಂತಿಮಗೊಳಿಸುವುದು ಈಗ ಪೂರ್ಣಗೊಂಡಿದೆ.

5. ನಾಗರೀಕ ವಿಮಾನಯಾನ ಬ್ಯೂರೋದೊಂದಿಗೆ,ಭದ್ರತೆ, ಕಸ್ಟಮ್ಸ್, ವಲಸೆವಾಯು ಸಂಚಾರ ಇತ್ಯಾದಿಗಳ ಬಗೆಗಿನ ಅಗತ್ಯತೆಗಳ ಅಂತಿಮ ರಚನೆ ಕುರಿತು ಚರ್ಚೆ ನಡೆದಿದೆ.

6. ಯೋಚನಾ ಒಪ್ಪಂದಗಳಾದ ರಿಯಾಯಿತಿ ಒಪ್ಪಂದ ಎ.ಟಿ.ಪಿ.ಒಪ್ಪಂದ ರಾಜ್ಯ ನೆರವಿನ ಒಪ್ಪಂದ ಮತ್ತು ಭೂ ಗುತ್ತಿಗೆ ಒಪ್ಪಂದಗಳು ಚರ್ಚೆಯಲ್ಲಿದ್ದು ಮತ್ತು ಹಣಕಾಸು ಸಮಾಪ್ತಿಗೆ ಮುಂಚಿತವಾಗಿ ಅವುಗಳನ್ನು ಅಖೈರುಗೊಳಿಸಲಾಗುವುದು.

7. ನೀರು ಸರಬರಾಜು ಮತ್ತು ವಿದ್ಯುತ್ ಸರಬರಾಜು ಹಾಗೂ ಜಮೀನನ್ನು ಒದಗಿಸುವ ಮೂಲಕ ರಾಜ್ಯ ಸರ್ಕಾರವು ಯೋಜನೆಗೆ ಅನುಕೂಲ ಕಲ್ಪಿಸಿದೆ.

ಆ. ಈ ವರೆಗೆ ರಾಜ್ಯ ಸರ್ಕಾರವು ರೂ .163.73 ಕೋಟಿಗಳನ್ನು ವೆಚ್ಚ ಮಾಡಿದೆ.

ಇ. ಸನ್ಮಾನ್ಯ ಪ್ರಧಾನ ಮಂತ್ರಿಗಳು ದಿನಾಕ 19-1-2001 ರಂದು ಯೋಜನೆಯನ್ನು ವಸ್ತುಶಃ ಅನಾವರಣಮಾಡಿರುತ್ತಾರೆ.

ಈ. ಯೋಜನೆಗೆ ಮೂಲಭೂತವಾಗಿ ಅಗತ್ಯವಾಗಿರುವ ಅನುಮತಿಗಳನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಳ್ಳಲಾಗಿದೆ. ಆದಾಗ್ಯೂ ಬಿಐಎಎಲ್ ಮತ್ತು ಭಾರದ ಸರ್ಕಾರದ ನಡುವಿನ ರಿಯಾಯಿತಿ ಒಪ್ಪಂದವು ಹಣಕಾಸು ಸಮಾಪ್ತಿಯನ್ನು ಸ್ಥಾಪಿಸಲು ಕಾನೂನಿನ ಅತ್ಯಂತ ಮುಖ್ಯವಾದ ಒಂದು ಒಪ್ಪಂದವಾಗಿದೆ ಈ ಬಗ್ಗೆ ಭಾರತ ಸರ್ಕಾರವು ಅಧಿಕಾರಸ್ಥರೊಂದಿಗೆ ಹಲವಾರು ಸುತ್ತಿನ ಚರ್ಚೆಗಳು ನಡೆದಿದೆ. ರಿಯಾಯಿತಿ ಒಪ್ಪಂದಕ್ಕೆ ಸಹಿ ಹಾಕುವ ಮುನ್ನ 1994ರ ಭಾರತೀಯ ವೈಮಾನಿಕ ಪ್ರಾಧಿಕಾರದ ಕಾಯ್ದೆಗೆ ಕೆಲವೊಂದು ತಿದ್ದುಪಡಿಗಳನ್ನು ಮಾಡಲಾಗುತ್ತಿದೆ. ಪ್ರಸ್ತುತ ಸಂಸತ್ ಅಧಿವೇಶನದಲ್ಲಿ ನಾಗರೀಕ ವಿಮಾನ ಯಾವ ಮಂತ್ರಾಲಯವು ಈ ತಿದ್ದುಪಡಿಗಳನ್ನು ತರಲು ಯೋಚಿಸುತ್ತಿರುವುದಾಗಿ ತಿಳಿದು ಬಂದಿದೆ.

ಉ. ನಿರೀಕ್ಷಿತ 30 ತಿಂಗಳ ನಿರ್ಮಾಣ ಅವಧಿಯೊಂದಿಗೆ ಮತ್ತು ಪರೀಷಾರ್ಥ ಅವಧಿಯ ನಂತರ 2006 ರಏಪ್ರಿಲ್‌ನಿಂದ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಾಯು ಯಾವ ಸೇರೆಯು ಚಾಲನೆಗೊಳ್ಳಲಿಗೆಯೆಂದು ನೀರಿಕ್ಷಿಸಲಾಗಿದೆ.

**ಬೆಂಗಳೂರು ನಗರಕ್ಕೆ 15 ವರ್ಷ ಪೂರೈಸಿದ ಹಳೆಯ ಸಾರಿಗೆ ವಾಹನಗಳ ನಿಷೇಧ**

186(42) : ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ) : ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು ನಗರದಲ್ಲಿ ಹಾಲು ಸಾಗಾಣಿಕೆಗೆ, ಕಸ ಸಾಗಾಣಿಕೆ, ಆಂಬ್ಯುಲೆನ್ಸ್ ಇತ್ಯಾದಿ ಸೇವೆ ಸಲ್ಲಿಸುತ್ತಿರುವ 15 ವರ್ಷಗಳು ಪೂರೈಸಿದ ಸಾರಿಗೆ ವಾಹನಗಳನ್ನು ನಿಷೇದಿಸಲು ಸರ್ಕಾರ ನಿರ್ಧರಿಸಿದೆಯೇ?

ಇ. 15 ವರ್ಷಗಳು ಹಳೆಯದಾದರೂ ಸಹ ಹಲವಾರು ವಾಹನಗಳು ಸುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ. ಬೆಂಗಳೂರು ನಗರದಲ್ಲಿ ಹೊಸ ವಾಹನಗಳು ಕಸ ಸಾಗಾಣಿಕೆ ಇತ್ಯಾದಿಗಳಿಗೆ ದೊರಕದೇ ಸಾರ್ವಜನಿಕ ಸೇವೆಗಳಿಗೆ ಧಕ್ಕೆಯುಂಟಾಗುವುದನ್ನು ತಪ್ಪಿಸಲು ಈ ಉದ್ದೇಶಿತ ನಿರ್ಭಂದವನ್ನು ಸರ್ಕಾರ ಕೈ ಬಿಡುತ್ತದೆಯೆ?

ಶ್ರೀ ಬಿ.ರಮಾನಾಥ್ ರೈ (ಸಾರಿಗೆ ಸಚಿವರು)

ಅ. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಮಾತ್ರ 15 ವರ್ಷಕ್ಕೂ ಮೇಲ್ಪಟ್ಟ ಹಳೆಯ ಸಾರಿಗೆ ವಾಹನಗಳ ಸಂಚಾರವನ್ನು ಮೂರು ಹಂತಗಳಲ್ಲಿ ನಿಷೇಧಿಸಲು ಸರ್ಕಾರ ಆದೇಶ ಹೊರಡಿಸಿದೆ.

20 ವರ್ಷಕ್ಕಿಂತ ಮೇಲ್ಪಟ್ಟ ವಯೋಮಿತಿ ವಾಹನಗಳಿಗೆ 01-07-2003 ರಿಂದ ಜಾರಿಗೆ ಬರುತ್ತದೆ.

17 ರಿಂದ 20 ವರ್ಷ ವಯೋಮಿತಿ ವಾಹನಗಳಿಗೆ 01-10-2003 ರಿಂದ ಜಾರಿಗೆ ಬರುತ್ತದೆ.

15 ರಿಂದ 17 ವರ್ಷ ವಯೋಮಿತಿ ವಾಹನಗಳಿಗೆ 01-06-2004 ರಿಂದ ಜಾರಿಗೆ ಬರುತ್ತದೆ.

ಆ. ಸಾಧಾರಣವಾಗಿ 15 ವರ್ಷ ಹಳೆಯ ಸಾರಿಗೆ ವಾಹನಗಳು ಪರಿಸರ ಮಾಲಿನ್ಯ ಮಾಡುವುದು ಕಂಡು ಬರುತ್ತದೆ.